ಕೂಡಲೇ ರಾಜನ ಬೇನೆ ತಕ್ಷಣ ಗುಣವಾಯಿತು. ಮಹಾರಾಜನಿಗೆ ತುಂಬಾ ಸಂತೋಷವಾಗಿ ಮಕ್ಕಳಿಬ್ಬರನ್ನೂ ಬಹುವಾಗಿ ಕೊಂಡಾಡಿ ಅವರ ಗೌರವಾರ್ಥ ದೊಡ್ಡ ಔತಣವನ್ನು ಏರ್ಪಡಿಸಿದ. ಚಿಕ್ಕವನ ಮೇಲೆ ಎಷ್ಟು ಸಿಟ್ಟು ಬಂದಿತೆಂದರೆ, ತಕ್ಷಣ ಅವನ ತಲೆಯನ್ನು ಕಡಿದುಬಿಡುವಂತೆ ಆಜ್ಞೆಯನ್ನು ಕೊಟ್ಟುಬಿಟ್ಟನು. ಆದರೆ ಸ್ವಲ್ಪ ದಿನಗಳ ನಂತರ ರಾಜನಿಗೆ ತನ್ನ ಕೊನೆಯ ಪುತ್ರನ ಒಳ್ಳೆಯ ಗುಣಗಳನ್ನು ಸ್ಮರಿಸಿಕೊಂಡು ತುಂಬಾ ದುಃಖವಾಗಿ 'ಹಾ! ರಾಜಕುಮಾರ, ನನ್ನ ಕೋಪಕ್ಕೆ ಧಿಕ್ಕಾರವಿರಲಿ. ನಿನ್ನಂತಹ ಸುಪುತ್ರನಿಗೆ ಹೇಗೆ ಇಂಥ ಘೋರ ಶಿಕ್ಷೆ ಕೊಟ್ಟೆ? ಪರಮಪಾಪಿ ನಾನು' ಎಂದು ಬಹುವಾಗಿ ರೋಧಿಸಿದನು. ಅನ್ನ ಆಹಾರ ತೊರೆದು ರಾಜ ಸಂಕಟಪಡುವುದನ್ನು ಕಂಡು ಮಂತ್ರಿ ಸಹಿಸಲಾರದೆ 'ಪ್ರಭು ಕ್ಷಮಿಸಬೇಕು. ಆವತ್ತು ನಿಮ್ಮ ಆಜ್ಞೆಯನ್ನು ಪಾಲಿಸಲು ಮನಸ್ಸು ಬಾರದೆ ರಾಜಕುಮಾರನನ್ನು ಅಡವಿಯಲ್ಲಿ ಬಿಟ್ಟು ಬಂದೆವು. ಅವರನ್ನು ಕರೆಸಬಹುದು' ಎನ್ನುತ್ತಲೂ ರಾಜ ತನ್ನ ಸೇವಕರನ್ನು ಅವನನ್ನು ಹುಡುಕಿ ತರಲು ಅಡವಿಗೆ ಕಳಿಸಿದನು. ಆದರೆ ಎಲ್ಲಿಯೂ ಅವನ ಪತ್ತೆಯಾಗಲಿಲ್ಲ.

ಹಾಗೇ ದಿನಗಳು ಕಳೆದು ಕಿರಿಯ ರಾಜಕುಮಾರ ಆ ಮಾಂತ್ರಿಕ ಅರಮನೆಯನ್ನು ಕಂಡುಬಂದು ಸರಿಯಾಗಿ ಒಂದು ವರ್ಷ ಕಳೆಯಿತು. ತಮ್ಮನಿಂದ ಅಲ್ಲಿಯ ಸಂಗತಿಗಳನ್ನೆಲ್ಲ ತಿಳಿದುಕೊಂಡಿದ್ದ ಹಿರಿಯ ರಾಜಕುಮಾರನಿಗೆ ತಾನೇ ಹೋಗಿ ಆ ರಾಜಕುಮಾರಿಯನ್ನು ವರಿಸಬೇಕೆಂದು ಆಸೆಯಾಗಿ ಕೂಡಲೇ ಕುದುರೆಯನ್ನೇರಿ ಹೊರಟುಬಿಟ್ಟನು. ಎರಡನೆಯವನಿಗೂ ಅದೇ ಆಲೋಚನೆ ಬಂದು ಅವನೂ ತನ್ನ ಕುದುರೆಯನ್ನೇರಿ ಹೊರಟನು.

ಇತ್ತ ಆ ಸುಂದರ ರಾಜಕುಮಾರಿಗೆ ತನ್ನ ರಾಜ್ಯಕ್ಕೆ ಸಮರ್ಥನಾದ ರಾಜನ ಆಯ್ಕೆಯಾಗಬೇಕು ಎನಿಸಿದ್ದರಿಂದ ಅವಳು ತನ್ನ ಅರಮನೆಗೆ ಬರುವುದಕ್ಕೆ ಬಾಗಿಲವರೆಗೂ ಥಳ ಥಳ ಹೊಳೆಯುವ ಚಿನ್ನದ ತಗಡಿನ ಒಂದು ರಸ್ತೆಯನ್ನು ಮಾಡಿಸಿದ್ದಳು. 'ನನ್ನ ರಾಜಕುಮಾರ ಅತ್ತ ಇತ್ತ ನೋಡದೆ, ನನಗಾಗಿ ಈ ಚಿನ್ನದ ಹಾದಿಯ ಮೇಲೇ ಧಾವಿಸಿ ಬರುತ್ತಾನೆ. ಅವನನ್ನು ಸ್ವಾಗತಿಸಿ ಕರೆತನ್ನಿ. ಬೇರೆ ಹಾದಿಯಿಂದ ಬಂದವರನ್ನು ಒಳಗೆ ಬಿಡಬೇಡಿ' ಎಂದು ತನ್ನ ಸೇವಕರಿಗೆ ಅಪ್ಪಣೆ ಮಾಡಿದಳು.

ಹಿರಿಯ ರಾಜಕುಮಾರ ಚಿನ್ನದ ರಸ್ತೆಯನ್ನು ಕಂಡ ಕೂಡಲೇ ಅದರ ಮೇಲೆ ಕುದುರೆ ಓಡಿಸಿ ಹಾಳುಗೆಡವಲು ಮನಸ್ಸು ಬಾರದೆ ಅದರ ಪಕ್ಕದ ದಾರಿಯಲ್ಲಿ ಹುಷಾರಾಗಿ ಬಂದನು. ಆದರೆ ಅವನನ್ನು ಬಾಗಿಲ ಬಳಿ ಬಿಡಲಿಲ್ಲ. ಎರಡನೆಯವನೂ 'ಓ ಎಂಥ ರಸ್ತೆ! ಎಂದು ಎಚ್ಚರಿಕೆಯಿಂದ ಪಕ್ಕದಿಂದಲೇ ಬಂದನು. ಅವನಿಗೂ ಒಳಗೆ ಪ್ರವೇಶ ಸಿಗಲಿಲ್ಲ. ಕಡೆಗೆ ಕಿರಿಯ ರಾಜಕುಮಾರ ತನ್ನ ಬಿಳಿಯ ಕುದುರೆಯನ್ನು ಏರಿ ಬಂದವನು ತನ್ನ ರಾಜಕುಮಾರಿಯನ್ನು ಕಾಣುವ ಆತುರದಲ್ಲಿ ಯಾವ ಕಡೆಗೂ ನೋಡದೆ ನೇರವಾಗಿ ಚಿನ್ನದ ರಸ್ತೆಯ ಮೇಲೇ ಕುದುರೆಯನ್ನು ಓಡಿಸಿಕೊಂಡು ಧಾವಿಸಿ ಬಂದನು. ತಕ್ಷಣ ಅರಮನೆಯ ಬಾಗಿಲನ್ನು ತೆರೆದು ಸೇವಕರು ಅವನನ್ನು ಬರಮಾಡಿಕೊಂಡರು. ಒಳಗೆ ಹೊಸಿಲ ಬಳಿ ಆ ಸುಂದರ ರಾಜಕುಮಾರಿ ಮುಗುಳು ನಗುತ್ತ ಅವನನ್ನು ಪ್ರೀತಿಯಿಂದ ಸ್ವಾಗತಿಸಿದಳು. ಕೂಡಲೇ ಆ ಅರಮನೆಯನ್ನು ಮುಸುಕಿದ್ದ ಮಂತ್ರ ಶಕ್ತಿ ಮಾಯವಾಗಿ ಹೋಯಿತು. ನಿದ್ರಾವಶರಾಗಿದ್ದ ಅಲ್ಲಿಯ ಜನರೆಲ್ಲರೂ ಎಚ್ಚೆತ್ತು ಸಂಭ್ರಮಗೊಂಡರು. ಮದುವೆ ವಿಜೃಂಭಣೆಯಿಂದ ನಡೆಯಿತು. ರಾಜಕುಮಾರ ತನ್ನ ಸುಂದರ ಪತ್ನಿಯೊಡನೆ ತಂದೆಯ ಮನೆಗೆ ಹಿಂದಿರುಗಿದಾಗ ಅವರನ್ನು ಎಲ್ಲರೂ ಅತ್ಯಾನಂದದಿಂದ ಬರಮಾಡಿಕೊಂಡರು. ಹಿರಿಯ ಅಣ್ಣಂದಿರ ಮೋಸವನ್ನು ತಿಳಿದ ಮಹಾರಾಜ ಅವರಿಬ್ಬರನ್ನೂ ಸೆರೆಮನೆಗೆ ಅಟ್ಟಿಬಿಟ್ಟನು. ಕಿರಿಯ ರಾಜಕುಮಾರನಿಗೇ ಪಟ್ಟವಾಗಿ ಕ್ರಮೇಣ ಆ ರಾಜ್ಯಕ್ಕೆ ಅವನು ಅವನ ಹೆಂಡತಿಯೇ ರಾಜ ರಾಣಿಯರಾಗಿ ಸುಖವಾಗಿದ್ದರು.